ಪಿಡಬ್ಲ್ಯೂ-1(ಹೆಚ್ ಎನ್ ರಮೇಶ್ )

ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದಃ-

1. ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

2. ದಿನಾಂಕ 27.02.2012 ರಂದು ನೋಂದಾಯಿತ ಕ್ರಯದ ಕರಾರು ಪತ್ರವನ್ನು ನಿಪಿ-1 ಎಂದು, ನಿಪಿ-1 ಕ್ಕೆ ನಾನು ಸಹಿ ಮಾಡಿದ್ದ, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ಕ್ಕೆ ಪ್ರತಿವಾದಿ ಲಕ್ಷ್ಮಮ್ಮ ಹೆಬ್ಬೆಟ್ಟು ಗುರುತು ಹಾಕಿರುತ್ತಾರೆ. ನಿಪಿ-1 ಕ್ಕೆ ಸಾಕ್ಷಿದಾರರಾಗಿ ರವಿಕುಮಾರ್ ಮತ್ತು ರಾಜೇಗೌಡರವರು ಸಹಿ ಮಾಡಿರುತ್ತಾರೆ. ನಿಪಿ-1 ನ್ನು ಬಿಕ್ಲಂದಾರರಾದ ಹೆಚ್ ಪ್ರಭಾಕರ್ ರವರು ತಯಾರು ಮಾಡಿರುತ್ತಾರೆ. ದಾವಾ ಸ್ವತ್ತಿನ 2 ಇಸಿ ಗಳನ್ನು ನಿಪಿ-2 ಮತ್ತು ನಿಪಿ-3 ಎಂದು, ಒಂದು ಎಂ.ಆರ್ ನ ನಕಲನ್ನು ನಿಪಿ-4 ಎಂದು, ದಿನಾಂಕ 17.02.2021 ರಂದು ಪ್ರತಿವಾದಿಗೆ ಕಳುಹಿಸಿರುವ ಲಿಗಲ್ ನೋಟಿಸ್ ನ ಕಛೇರಿ ಪ್ರತಿಯನ್ನು ನಿಪಿ-5 ಎದು, ಪ್ರತಿವಾದಿ ಕಳುಹಿಸಿರುವ ಜವಾಬು ನೋಟಿಸ್ ಅನ್ನು ನಿಪಿ-6 ಎಂದು, 7 ಅಂಚೆ ರಶೀದಿಗಳನ್ನು ಒಟ್ಟಾರೆಯಾಗಿ ನಿಪಿ-7 ಎಂದು ಗುರುತಿಸಲಾಯಿತು.

3. ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಎನ್ ಎಸ್ ಕುಲಕರ್ಣಿ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.